ಐಸಿಎಆರ್–ಕೃಷಿ ವಿಜ್ಞಾನ ಕೇಂದ್ರ, ರಾಯಚೂರು

ಮಾರ್ಚ್ ನಮ್ಮ ಹೆಮ್ಮೆಯ ರೈತ 2024

ಹೆಸರು : ಶ್ರೀ. ಮಲ್ಲಿಕಾರ್ಜುನ ತಂ/ಶೇಖರಪ್ಪ

ವಿಳಾಸ : ಸಾ: ಕಲಮಂಗಿ ಹೊ. ತುರ್ವಿಹಾಳ ತಾ: ಸಿಂಧನೂರು

ವಯಸ್ಸು : 33 ವರ್ಷ

ಶೈಕ್ಷಣಿಕ ವಿದ್ಯಾರ್ಹತೆ : ಪಿ.ಯು.ಸಿ.

ಮೊಬೈಲ್ ಸಂಖ್ಯೆ : 8746046467

ಕುಟುಂಬ ಸದಸ್ಯರ ಸಂಖ್ಯೆ : 06

ಒಟ್ಟು ಉಳುಮೆ ಭೂಮಿ : 31

ಬೆಳೆಗಳು : ಕಬ್ಬು, ಡ್ರ್ಯಾಗನ್ ಹಣ್ಣು, ಬಾಳೆ, ತೆಂಗು, ಈರುಳ್ಳಿ, ತರಕಾರಿ ಬೆಳೆಗಳು, ನವಣೆ, ಕಡಲೆ, ತೊಗರಿ, ಸಜ್ಜೆ, ಸೂರ್ಯಕಾಂತಿ ಇತರೆ (ಶ್ರೀಗಂಧ, ಮಹಾಗನಿ, ಹೆಬ್ಬೇವು ಹಾಗೂ ವಿವಿಧ ಮೇವಿನ ಬೆಳೆಗಳು)

ದನಕರು/ಮೀನು : ಸ್ವದೇಶಿ ಆಕಳು–5, ಎಮ್ಮೆ–5, ಕುರಿಗಳು–2, ಮೇಕೆ–2, ಕೋಳಿ–48 ಹಾಗೂ ಮೀನು–5000

ಉದ್ಯಮಗಳು : ಕೃಷಿ ಮತ್ತು ಇತರೆ ಉಪಕಸಬುಗಳು

ಪ್ರಶಸಿ/ಗೌರವಗಳು :
1. ಅತ್ಯುತ್ತಮ ಕಬ್ಬು ಎನ್.ಎಲ್.ಎಸ್. ಶುಗರ್ ಕಂಪನಿ
2. ಅತ್ಯುತ್ತಮ ಜಿಲ್ಲೆಯ ರೈತ (ರೈತ ಸಂಪರ್ಕ ಕೇಂದ್ರ)
3. ಉದಯೋನ್ಮುಖ ರೈತ ರಾಜ್ಯ ಸರ್ಕಾರ (ರಾಜ್ಯಮಟ್ಟ)
4. ಡಿಸ್ಟ್ರಿಕ್ಟ್ ಬಿಲಿಯನೇರ್ ಫಾರ್ಮರ್ ಆಫ್ ಇಂಡಿಯಾ ಅವಾರ್ಡ್–2023 ಐಎಆರ್‌ಐ–ಪುಸ, ನವದೆಹಲಿ
5. ಸೂಪರ್ ಸ್ಟಾರ್ ರೈತ, ವಿಜಯ ಕರ್ನಾಟಕ











ವಾರ್ಷಿಕ ಒಟ್ಟು ಆದಾಯ : 28.45 ಲಕ್ಷ

ವಿಶೇಷತೆಗಳು:

- ಇವರು ತಮ್ಮ 20 ಎಕರೆ ಜಮೀನಿನಲ್ಲಿ ಸಮಗ್ರ ಕೃಷಿ ಅಳವಡಿಕೆ ಮಾಡಿದ್ದಾರೆ.
- ಶ್ರೀಗಂಧ ನರ್ಸರಿ ಸಸಿಗಳನ್ನು ತಮ್ಮ ತೋಟದಲ್ಲಿ ಬೆಳೆಸಿ ಸ್ಥಳೀಯ ಹಾಗೂ ಹೊರ ರಾಜ್ಯಗಳ ರೈತರಿಗೆ ಮಾರಾಟ ಮಾಡುತ್ತಿದ್ದಾರೆ.
- ಡ್ರ್ಯಾಗನ್ ಹಣ್ಣುಗಳು ಬೆಳೆದು ಸ್ಥಳೀಯ ರೈತರಿಗೆ ಪರಿಚಯಿಸಿ ಹಾಗೂ ಉತ್ಪಾದಿಸಿದ ಬೆಳೆಯನ್ನು ಆಂಧ್ರಪ್ರದೇಶ, ತೆಲಂಗಾಣ, ತಮಿಳುನಾಡು ಹಾಗೂ ಮಹಾರಾಷ್ಟ್ರ ರಾಜ್ಯಗಳಿಗೆ ಮಾರಾಟ ಮಾಡುತ್ತಿದ್ದಾರೆ.
- ಕಬ್ಬು ಬೆಳೆಯನ್ನು ಎನ್.ಎಲ್.ಎಸ್. ಶುಗರ್ ಕಂಪನಿಯೊಂದಿಗೆ ಒಡಂಬಡಿಕೆಯನ್ನು ಮಾಡಿಕೊಂಡಿರುವರು.
- ಕಬ್ಬು ಬೆಳೆಗೆ ಹನಿ ನೀರಾವರಿ ಅಳವಡಿಕೆ ಮಾಡಿ ಕಡಿಮೆ ನೀರು ಬಳಸಿ ಹೆಚ್ಚಿನ ಇಳುವರಿ ಪಡೆಯುತ್ತಿದ್ದಾರೆ.
- ತಮ್ಮ ಜಮೀನಿನ ಬೋರ್ವೆಲ್ ನೀರನ್ನು ಹೊರ ತೆಗೆಯಲು ಸೋಲಾರ ಪೆನಲ್ ಬಳಕೆ ಹಾಗೂ ಸೋಲಾರ ಫೆನ್ಸಿಂಗ್ ಬಳಸಿಕೊಂಡು ತಮ್ಮ ಜಮೀನನ್ನು ರಕ್ಷಣೆ ಮಾಡಿಕೊಂಡಿರುತ್ತಾರೆ.
- ಸೋಲಾರ ಕೋಳಿ ಶೆಡ್ ನಿರ್ಮಿಸಿ ನಾಟಿ ಕೋಳಿಗಳನ್ನು ಸಾಕಾಣಿಕೆ ಮಾಡುತಿದ್ದಾರೆ.
- ಜಮೀನಿನಲ್ಲಿ ಬೆಲೆ ಬಾಳುವ ಗಿಡಮರಗಳ ರಕ್ಷಣೆಗಾಗಿ ಸ್ವಂತ ಬಂದೂಕನ್ನು ಹೊಂದಿರುತ್ತಾರೆ. ಇದಕ್ಕಾಗಿ ಸರ್ಕಾರದಿಂದ ಪರವಾನಗಿ ಪಡೆದುಕೊಂಡಿರುತ್ತಾರೆ.
- ಸುಧಾರಿತ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡು ಸಿರಿಧಾನ್ಯಗಳು, ದ್ವಿದಳ ಧಾನ್ಯಗಳು, ಎಣ್ಣೆಕಾಳು ಬೆಳೆಗಳನ್ನು ಸಹ ಬೆಳೆಯುತ್ತಿದ್ದಾರೆ.
- ತೊಗರಿ ಬೆಳೆಯಲ್ಲಿ ಕುಡಿ ಚಿವುಟುವಿಕೆ ಹಾಗೂ ಹನಿ ನೀರವಾರಿ ಪದ್ಧತಿಯ ತಂತ್ರಜ್ಞಾನಗಳನ್ನು ಆಳವಡಿಸಿಕೊಂಡು ಹೆಚ್ಚಿನ ಇಳುವರಿಯನ್ನು ಪಡೆಯುತ್ತಿದ್ದಾರೆ.
- ಕಬ್ಬು ಇತರ ಬೆಳೆ ಹುಲಿಕೆಗಳನ್ನು ಸುಡದೆ ಭೂಮಿಗೆ ಹೊದಿಕೆ ಮಾಡಿ (ಮಲ್ಚಿಂಗ್) ಭೂಮಿಯ ಫಲವತ್ತತೆಯನ್ನು ಕಾಪಾಡಿಕೊಂಡು ಬಂದಿರುತ್ತಾರೆ.
- ಜಮೀನಲ್ಲಿ ಕಸಕಡ್ಡಿಗಳನ್ನು ಬಳಸಿ ಎರೆಹುಳ ಗೊಬ್ಬರವನ್ನು ತಯಾರಿಸಿ ಜಮೀನಿಗೆ ಬಳಸುವುದರೊಂದಿಗೆ ಸಾವಯವ ಕೃಷಿಯ ಬಗ್ಗೆ ಹೆಚ್ಚು ಗಮನ ಹರಿಸಿ, ಮಾರಾಟವು ಸಹ ಮಾಡುತ್ತಿದ್ದಾರೆ.
- ತರಕಾರಿ ಬೆಳೆಗಳನ್ನು ಸಾವಯವ ಪದ್ಧತಿಯಲ್ಲಿ ಬೆಳೆದು ಸ್ಥಳೀಯ ಮಾರುಕಟ್ಟೆಗೆ ಮಾರಾಟ ಮಾಡುತ್ತಿದ್ದಾರೆ.
- ಇವರ ಜಮೀನಿನಲ್ಲಿ ಪ್ರತಿ ದಿನ 5 ರಿಂದ 6 ಜನ ಕೃಷಿ ಕಾರ್ಮಿಕರು ಕಾರ್ಯನಿರ್ವಹಿಸುತ್ತಿದ್ದಾರೆ.
- ಕೃಷಿಯಿಂದ ಉತ್ತಮ ಆರ್ಥಿಕತೆಯನ್ನು ಹೊಂದಿ ನೆಮ್ಮದಿಯ ಜೀವನ ನಡೆಸುತ್ತಿದ್ದಾರೆ.





